ದಿನಾಂಕಃ 12-08-2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟಿ ಸವಾಲುಃ–** 2 ಮತ್ತು 3 ನೇ ಪ್ರತಿವಾದಿಯರ ಪರ ಶ್ರೀ ಎಫ ಎನ ಎನ ವಕೀಲರಿಂದ

1 ನೇ ಪ್ರತಿವಾದಿಯ ಸ್ವಭಾವ ಹಾಗೂ ಗುಣ ನನಗೆ ವಯಕ್ತಿಕವಾಗಿ ಗೊತ್ತು ಎಂದರೆ ಸರಿ. 1 ನೇ ಪ್ರತಿವಾದಿ ಮಧ್ಯಪಾನ ಮಾಡುತ್ತಿದ್ದಾ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು 1 ನೇ ಪ್ರತಿವಾದಿಯ ಮನೆ ಹತ್ತಿರದಲ್ಲಿ ಇವೆ ಎಂದರೆ ಸರಿ. ಹಾಗಾಗಿ 1 ನೇ ಪ್ರತಿವಾದಿ ಮಧ್ಯಪಾನ ಮಾಡುತ್ತಿದ್ದ ವಿಷಯ ನನಗೆ ಗೊತ್ತಿದ್ದರೂ ಸಹ ನಾನು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಬರೆದ ವಿಷಯಗಳು ನನಗೆ ಗೊತ್ತು. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ವಾದಿ ಎಲ್ಲರಕ್ಕಿಂತ ಹೆಚ್ಚಿನ ಬೆಲೆಗೆ ಜಮೀನು ಖರೀದಿಸಲು ಕೇಳಿದ್ದರು ಎಂದು ಹೇಳಿದ್ದು ಅವರಿಗಿಂತ ಕಡಿಮೆ ಬೆಲೆಗೆ ಯಾರು ಕೇಳಿದ್ದರು ಎಂದು ನನಗೆ ಗೊತ್ತಿರುವುದಿಲ್ಲ.

ವಾದಿ ಇದೇ ರೀತಿ ಬೇರೆ ಬೇರೆ ಖೊಟ್ಟಿ ಖರೀದಿ ಕರಾರು ಪತ್ರಗಳನ್ನು ಸೃಷ್ಟಿಸಿ ಬೇರೆ ಬೇರೆ ವ್ಯಕ್ತಿಗಳ ವಿರುದ್ಧ ದಾವೆಗಳನ್ನು ಹಾಕಿರುತ್ತಾನೆ ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿ ಸೃಷ್ಟಿ ಮಾಡಿದ ಖೊಟ್ಟಿ ಖರೀದಿ ಕರಾರು ಪತ್ರಗಳಿಗೆ ಖಾಯಂ ಆಗಿ ನಾನು, ಡಿಳ್ಳೆಪ್ಪ ಉಂಡಿ ಹಾಗೂ ಎಸ.ಎಲ್. ಉಚ್ಚಂಗಿ ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮೂಲ ದಾವಾ ಸಂಖ್ಯೆ 48/2017

ರಲ್ಲಿ ಖರೀದಿ ಕರಾರು ಪತ್ರಕ್ಕೆ ನಾನು 3 ನೇ ಸಾಕ್ಷಿದಾರನಾಗಿ ನೋಡದೆ ಸಹಿ ಮಾಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿದ್ದೆನೆ ಎಂದರೆ ಸರಿಯಲ್ಲ. ಈ ಪ್ರಕಾರ ವಾದಿ ಸೃಷ್ಟಿಸಿಕೊಂಡ ಖೊಟ್ಟಿ ಖರೀದಿ ಕರಾರು ಪತ್ರಕ್ಕೆ ಸಹಿ ಮಾಡುವುದೇ ನನ್ನ ಕೆಲಸ ಎಂದರೆ ಸರಿಯಲ್ಲ.

2014 ರಲ್ಲಿ ನಮ್ಮ ಊರಿನಲ್ಲಿ 1 ನೇ ಪ್ರತಿವಾದಿ ವಾದಿಯಿಂದ ರೂ. 6,56,375/- ಸಂಚಕಾರ ತರೀಖ ಪಡೆದುಕೊಂಡಿರುತ್ತಾನೆ. ಆ ಸಮಯದಲ್ಲಿ ನಾನು ಹಾಜರು ಇದ್ದೆ. ರೂ. 6,56,000/- ದ ಮುಖ ಬೆಲೆ ರೂ. 500/- ರ ನೋಟುಗಳು ಇದ್ದವು ಹಾಗೂ ಚಿಲ್ಲರೆ 375/- ರೂಪಾಯಿ ಇದ್ದವು. ರೂ 500/- ರ ಎಷ್ಟು ನೋಟುಗಳು ಇದ್ದವು ಎಂದರೆ ನನಗೆ ಗೊತ್ತಿರುವುದಿಲ್ಲ. ವಾದಿ ಹಾಗೂ 1 ನೇ ಪ್ರತಿವಾದಿ ನಡುವೆ ಆದ ಬೇರೆ ವ್ಯವಹಾರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು, ವಾದಿ ಮತ್ತು ಇತರೇ ಸಾಕ್ಷಿದಾರರು ಕೂಡಿಕೊಂಡು 1 ನೇ ಪ್ರತಿವಾದಿ ಮದ್ಯಪಾನ ಮಾಡುವುದನ್ನು ದುರುಪಯೋಗಪಡಿಸಿಕೊಂಡು ಬ್ಯಾಂಕಿನಿಂದ ಸಾಲ ಕೊಡಿಸುತ್ತೇವೆ ಎಂದು ಸುಳ್ಳು ಹೇಳಿ ಆತನನ್ನು ಸವಣೂರಿಗೆ ಕರೆದುಕೊಂಡು ಬಂದಿದ್ದೆವು ಎಂದರೆ ಸರಿಯಲ್ಲ. ನಾನು, ವಾದಿ ಮತ್ತು ಇತರೇ ಸಾಕ್ಷಿದಾರರು ಕೂಡಿಕೊಂಡು ಮದ್ಯಪಾನದ ಅಮಲಿನಲ್ಲಿ ಇದ್ದಂತಹ 1 ನೇ ಪ್ರತಿವಾದಿಯ ಸಹಿಯನ್ನು ನಾವು ಸೃಷ್ಟಿಸಿದ ದಾಖಲೆಗೆ ಪಡೆದು ಖರೀದಿ ಕರಾರುಪತ್ರವನ್ನು ಸೃಷ್ಟಿ

ಮಾಡಿದ್ದೇವೆ ಎಂದರೆ ಸರಿಯಲ್ಲ.

ದಾವಾ ಆಸ್ತಿ 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ವಾದಿ ಕೂಡಿಕೊಂಡು ಅನೇಕ ಖೊಟ್ಟಿ ಖರೀದಿ ಕರಾರು ಪತ್ರಗಳನ್ನು ಸೃಷ್ಟಿ ಮಾಡಿ ಅನೇಕ ಜನರಿಗೆ ಮೋಸ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳಿದಂತಹ ಯಾವುದೇ ಖರೀದಿ ವ್ಯವಹಾರ ವಾದಿ ಮತ್ತು 1 ನೇ ಪ್ರತಿವಾದಿಯ ನಡುವೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಖೊಟ್ಟಿ ಖರೀದಿ ಕರಾರುಪತ್ರದ ಮೇಲೆ ವಾದಿ ಈ ದಾವೆ ಸಲ್ಲಿಸಿದ್ದು ನಾನು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಕುಟುಂಬದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಯಾವ ಯಾವ ದಾವೆಗಳು ಇವೆ ಎಂಬ ಮಾಹಿತಿ ನನಗೆ ಇಲ್ಲ. ನಾನು ಹೇಳಿದಂತೆ 1 ನೇ ಪ್ರತಿವಾದಿ ಸ್ವಾ ಸ್ಥಚಿತ್ತದಿಂದ ಖರೀದಿ ಕರಾರುಪತ್ರ ವಾದಿಗೆ ಬರೆದುಕೊಟ್ಟಿಲ್ಲ ಹಾಗೂ ಆತ ಮದ್ಯಪಾನದ ಅಮಲಿನಲ್ಲಿರುವಾಗ ನಾವುಗಳು ಖರೀದಿ ಕರಾರುಪತ್ರಕ್ಕೆ ಆತನ ಸಹಿ ಪಡೆದಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮದ್ಯಪಾನ ಮಾಡುವ ದುರುಪಯೋಗ ಪಡೆದುಕೊಂಡು ಬ್ಯಾಂಕಿನ ಸಾಲಕ್ಕೆ ಬೋಜಾ ಕೂಡಿಸಬೇಕು ಎಂದು ಸುಳ್ಳು ಹೇಳಿ ನಾವುಗಳು ಖರೀದಿ ಕರಾರುಪತ್ರ ನೊಂದಣಿ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ವಾದಿ ಬೇರೆ ಬೇರೆ ಜನರಿಗೆ ಸಾಲ ಕೊಟ್ಟು ಖರೀದಿ ಕರಾರುಪತ್ರಗಳನ್ನು ಸೃಷ್ಟಿ ಮಾಡುತ್ತಿದ್ದು

ನಾನು ಮತ್ತು ಇತರೇ ಸಾಕ್ಷಿದಾರರು ಆ ಖರೀದಿ ಕರಾರು ಪತ್ರಗಳಿಗೆ ಸಹಿ ಮಾಡುತ್ತೇವೆ ಎಂದರೆ ಸರಿಯಲ್ಲ. ಇದೇ ರೀತಿ ನಾನು, ವಾದಿ ಹಾಗೂ ಇತರೇ ಸಾಕ್ಷಿದಾರರು ಕೂಡಿಕೊಂಡು ಅನೇಕ ಅಮಾಯಕರಿಗೆ ಮೋಸ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)